# INTERNATIONAL WOMENS DAY CELEBRATION

THEME

## "DigitALL: Innovation and technology for gender equality,"

## Highlights the role of innovative technology in promoting gender equality and meeting the health and developmental needs of women

## 08-03-2023




Vidyavardhaka Sangha (R), Mysuru
VIDYAVARDHAKA FIRST GRADE COLLEGE
Sheshadri Iyer Road, Mysuru -01
On the Occasion of International Women's Day
Special Lecture on
“CONSTITUTIONAL PROTECTION FOR INDIAN WOMEN”
Resource Person : Prof. H. M. Vasanthamma
Professor of Sociology (Rtd.)
Maharaja College, Mysuru.
Dr.S.MariGowda
Dr.S.Poornima


“CONSTITUTIONAL PROTECTION FOR INDIAN WOMEN”
Resource Person : Prof. H. M. Vasanthamma
Professor of Sociology (Rtd.)
Maharaja College, Mysuru.
2023 International Women's Day Theme
DigitALL: Innovation and Technology for Gender Equality
Time: 10:00 AM
Date: 08.03.2023
Venue:
Dr.S.MariGowda
Prof. Savitha K S

ಭಾರತದ ಒಟ್ಟು ಜನ ಸಂಖ್ಯೆಯಲ್ಲಿ ಅರ್ಧದಷ್ಟು ಮಹಿಳೆಯರಿದ್ದರೂ ಇಂದಿಗೂ ತಮ್ಮ ಹಕ್ಕುಗಳಿಗೆ, ಸಮಾನತೆಗೆ, ಅಧಿಕಾರ ಹಾಗೂ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕಾಗಿರುವುದು ವಿಷಾದನೀಯ ಎಂದು ಮಹಾರಾಜ ಕಾಲೇಜಿನ ಸಮಾಜಶಾಸ್ತ್ರದ ನಿವೃತ್ತ ಪ್ರಾಧ್ಯಾಪಕಿ ಪ್ರೊ.ಹೆಚ್.ಎಂ.ವಸಂತಮ್ಮ ತಿಳಿಸಿದರು. ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಪ್ರಯುಕ್ತ **"ಭಾರತದ ಮಹಿಳೆಗೆ ಸಂವಿಧಾನವು ಒದಗಿಸಿರುವ ರಕ್ಷಣೆ"** ಎಂಬ ವಿಷಯದ ಕುರಿತು ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ಅಮೇರಿಕಾದ ನ್ಯೂಯಾರ್ಕ್‌ನ ಗಾರ್ಮೆಂಟ್ಸ್‌ನ 15 ಮಹಿಳೆಯರು ಸಾರಾಜೆಟ್‌ಕಿಂಗ್‌ನ ನೇತೃತ್ವದಲ್ಲಿ ಕಾರ್ಖಾನೆಯಿಂದ ಹೊರಬಂದು 1908ರಲ್ಲಿ ಪ್ರಥಮ ಬಾರಿಗೆ ಸಮಾನ ವೇತನಕ್ಕಾಗಿ ಪ್ರತಿಭಟನೆ ಮಾಡಿದರು. ಅಂದಿನಿಂದ ಪ್ರಪಂಚದಾದ್ಯಂತ ಮಾರ್ಚ್ 8ಅನ್ನು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನಾಗಿ ಆಚರಿಸಲಾಗುತ್ತಿದೆ. ಇಂದಿಗೂ ಭಾರತದಲ್ಲಿರುವ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಸ್ವಾತಂತ್ರ್ಯಕ್ಕಾಗಿ, ಸಮಾನತೆಗಾಗಿ, ಅಧಿಕಾರಕ್ಕಾಗಿ ಪಿತೃ ಪ್ರಧಾನವಾದ ಸಮಾಜದ ಮುಂದೆ ಹೋರಾಡುತ್ತಿದ್ದಾರೆ. ವಚನಕಾರರು ಹೇಳುವಂತೆ ಆತ್ಮಕ್ಕೆ ಯಾವ ಹೆಣ್ಣು, ಗಂಡೆಂಬ ಬೇಧವೂ ಇಲ್ಲ. ಹೆಣ್ಣು ಗಂಡೆಂಬ ಜೈವಿಕವಾದ ವ್ಯತ್ಯಾಸ ಕೇವಲ ಮನುಷ್ಯರಲ್ಲಿದೆಯೇ ಹೊರತು ಪ್ರಕೃತಿಯಲ್ಲಿಲ್ಲ. ಹೆಣ್ಣೆಂಬ ಕಾರಣದಿಂದ ಯಾರು ನಕಾರಾತ್ಮಕವಾಗಿ ಯೋಚಿಸಬೇಕಾಗಿಲ್ಲ, ಪ್ರಕೃತಿಯಲ್ಲಿ ಮಾನವೀಯ ಮೌಲ್ಯಗಳಿಗೆ ಹೇಳಿ ಮಾಡಿಸಿದ ದೇಗುಲವೇ ಹೆಣ್ಣು. ಆದುದರಿಂದಲೇ ಹೆಣ್ಣು ಯಾವಾಗಲು ಕೀಳರಮೆಯಿಂದ ಬದುಕಬಾರದು.

1881ರಲ್ಲಿ ಭಾರತದ ಮೊದಲ ಪದವೀಧರೆ ಪಶ್ಚಿಮ ಬಂಗಾಳದಿಂದ ಬಂದರು. ಇಂದು ದೇಶದಲ್ಲಿ ಹೆಣ್ಣು ಮಕ್ಕಳಿಗೆ ಸಂವಿಧಾನವು ಹಲವು ಸವಲತ್ತುಗಳನ್ನು ನೀಡಿದೆ. ಆದರೂ ಹೆಣ್ಣಿನ ಮೇಲಿನ ಶೋಷಣೆಯು ನಿಂತಿಲ್ಲ ಎನ್ನುವುದೇ ದುರಂತ. ಹೆಣ್ಣು ಮಕ್ಕಳ ಮೇಲಾಗುತ್ತಿರುವ ದೌರ್ಜನ್ಯಕ್ಕೆ ಮನುವಿನ ಸ್ಮೃತಿ ವಾದವೇ ಕಾರಣ. ದೇಶದ ಹಲವು ಕಡೆಗಳಲ್ಲಿ ಹಲವು ಜನಾಂಗಗಳಲ್ಲಿ ಹೆಣ್ಣು ಭ್ರೂಣ ಹತ್ಯೆ ನಡೆಯುತ್ತಿರುವುದನ್ನು ನೋಡಬಹುದಾಗಿದೆ. ಹೆಣ್ಣು ಹೆಚ್ಚು ವಿದ್ಯಾವಂತರಾದಷ್ಟು ಸಾಮಾಜಿಕ ಸಮಸ್ಯೆಗಳು ಹೆಚ್ಚಾಗುತ್ತಲೇ ಇವೆ. ಅವರಲ್ಲಿಯೂ ಸಹ ಸ್ವಾರ್ಥ ಹೆಚ್ಚಾಗುತ್ತಲಿವೆ. ಮಹಿಳೆಯರು ನೆಮ್ಮದಿಯಾಗಿ ಹಾಗೂ ನಿಷ್ವಾರ್ಥವಾಗಿ ಬದುಕಬೇಕಾದರೆ ಪುರುಷರು ತಮ್ಮ ನಡವಳಿಕೆಯಲ್ಲಿ ಬದಲಾವಣೆಯನ್ನು ಮಾಡಿಕೊಳ್ಳಬೇಕಾಗಿದೆ. ಹೆಣ್ಣಾಗಲಿ, ಗಂಡಾಗಲಿ ಸಾಮರಸ್ಯದ ಜೀವನ ಅತ್ಯಂತ ಮುಖ್ಯ. ಭಾರತದಲ್ಲಿ ಮೊದಲಿನಿಂದಲೂ ಜಾತಿ ವ್ಯವಸ್ಥೆ ಜಾರಿಯಲ್ಲಿದ್ದು, ಅದು ತೊಲಗಬೇಕಿದೆ. ಜಾತಿ ವ್ಯವಸ್ಥೆ ಅಸಮಾನತೆ, ಸಂವಿಧಾನವು ಸಮಾನತೆಯನ್ನು ನೀಡಿದೆ. ಆದರೆ ಅವೆರಡೂ ತದ್ವಿರುದ್ದವಾದವುಗಳು ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಡಾ.ಎಸ್.ಮರೀಗೌಡರು ಮಾತನಾಡುತ್ತಾ ದೇಶ ಹಾಗೂ ರಾಜ್ಯದ ಒಟ್ಟು ಅಧಿಕಾರಿವರ್ಗದಲ್ಲಿ ಲಿಂಗ ಸಮಾನತೆಯ ಬಗ್ಗೆ ಅಂಕಿ ಅಂಶಗಳ ಸಮೇತ ವಿವರಣೆ ನೀಡಿದರು. ಮತದಾನ ಹಕ್ಕಿನ ಜಾಗೃತಿಗಾಗಿಯು ಹೋರಾಟ ಮಾಡಲಾಯಿತು. ಆರ್ಥಿಕ ಸ್ವಾತ'ಂತ್ರ್ಯ ಮಹಿಳೆಯರಿಗೆ ದೊರೆತರೆ ಬಹುಶಃ ಮಹಿಳೆಯರ ಮನಸ್ಥಿತಿ ಬದಲಾಗಬಹುದೆನ್ನುವ ಆತಂಕವಿದೆ. 85% ವಿಚ್ಛೇದನಗಳು ವಿದ್ಯಾವಂತ ಮಹಿಳೆಯರಲ್ಲಿಯೇ ಆಗುತ್ತಿದೆ. ಹೆಣ್ಣು ಗಂಡೆಂಬ ಬೇಧವಿಲ್ಲದೆ ಎಲ್ಲರೂ ಸಾಮರಸ್ಯದ ಜೀವನ ನಡೆಸಬೇಕೆಂದು ತಿಳಿಸಿದರು. ಉಪನ್ಯಾಸದಲ್ಲಿ ಕು.ಚಂದನ ಪ್ರಾರ್ಥಿಸಿದರೆ, ಪ್ರೊ.ಅನುಷ.ಎಂ.ಸಿ ನಿರೂಪಿಸಿ, ಡಾ.ಎಸ್.ಪೂರ್ಣಿಮ ಸ್ವಾಗತಿಸಿದರು. ಪ್ರೊ.ಸವಿತ.ಕೆ.ಎಸ್ ವಂದಿಸಿದ ಕಾರ್ಯಕ್ರಮದಲ್ಲಿ ಬೋಧಕರು, ಬೋಧಕೇತರರು ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.








Special Lecture on








VIDYAVARDHAKA
Special Lecture on


Sheshadri Iyer Road, Mysuru -01
On the Occasion of International Women's Day
Special Lecture on
CONSTITUTIONAL PROTECTION FOR INDIAN WOMEN"
Professor of Sociology
Wednesday












COLLEGE
ial Lecture on
OTECTION FOR INDIAN WOMEN
Prof. H. M. Vasanthamma
Venue:












VIDYAVARDHAKA FIRST GRADE COLLEGE






VIDYAVARDHAKA FIRST GRADE COLLEGE






ವಿದ್ಯೆಗೆ ಸರಸ್ವತಿ
ಸಂಪತ್ತಿಗೆ ಲಕ್ಷ್ಮಿ
ಶಕ್ತಿಗೆ ಪಾರ್ವತಿ
ಎಲ್ಲಕ್ಕೂ ಮಿಗಿಲಾಗಿ
ಜನ್ಮ ಕೊಟ್ಟವಳು ಹೆಣ್ಣು
ಇಂಥಾ ಲೋಕಮಾತೆಗೆ
ಕೋಟಿ ನಮನ
ಮಹಿಳಾ ದಿನಾಚರಣೆಯ
ಶುಭಾಶಯಗಳು